**ಕರ್ನಾಟಕ ಲೋಕಾಯುಕ್ತ**

ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ/1313/2021
ಪಿಒ/ಎ.ಆರ್.ಇ–2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:14/12/2021.

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

ವಿಷಯ: ಸರ್ಕಾರಿ ನೌಕರರಾದ ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕು, ನಾಗಲಮಡಿಕೆ ಹೋಬಳಿ, ರಾಯಚೆರಲು ವೃತ್ತದ, ಗ್ರಾಮ ಲೆಕ್ಕಿಗರು, **ಶ್ರೀ ಚೇತನ್ ಕುಮಾರ್ ಬಿನ್. ಸಿ. ದೊಡ್ಡವೀರುಪಣ್ಣ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ತುಮಕೂರು, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಚೇತನ್ ಕುಮಾರ್ ಬಿನ್. ಸಿ. ದೊಡ್ಡವೀರುಪಣ್ಣ, ಗ್ರಾಮ ಲೆಕ್ಕಿಗರು, ರಾಯಚೆರಲು ವೃತ್ತ, ನಾಗಲಮಡಿಕೆ ಹೋಬಳಿ, ಪಾವಗಡ ತಾಲ್ಲೂಕು: ತುಮಕೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ದೂರುದಾರರಾದ **ಶ್ರೀ. ಅಕಲಪ್ಪ ಬಿನ್ ಲೇಟ್ ತಿಪ್ಪಣ್ಣ, ಸಪಲಮ್ಮ ದೇವಸ್ಥಾನದ ಪೂಜಾರ್, ಪಳವಳ್ಳಿ, ನಾಗಲಮಡಿಕೆ ಹೋಬಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಳ್ಳಲಾಗಿದೆ. ತುಮಕೂರು, ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ:07/2019** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೊಟಕ್ಕೆ ಕಂಡು ಬರುತ್ತದೆ.

i. ದೂರುದಾರರ ಪಿತ್ರಾರ್ಜಿತ ಆಸ್ತಿ ಬಾಬ್ತು ರಾಯಚೆರಲು ಗ್ರಾಮದ ಸ.ನಂ.219 ರ ಜಮೀನಿನ ತಿದ್ದುಪಡಿ ಹಾಗೂ ಖಾತೆ ಬದಲಾವಣೆ ವಿಚಾರವಾಗಿ ಕೇಳಲು ಎದುರುದಾರರ ಕಛೇರಿಗೆ ಬಂದು ಭೇಟಿಮಾಡಿದ್ದು, ಎದುರುದಾರರು ಈಗಾಗಲೇ ಮಾಡಿರುವ ತಿದ್ದುಪಡಿ ಸಂಬಂದ 5,000/- ರೂ. ಲಂಚ ಕೊಡುವಂತೆ ದೂರುದಾರರನ್ನು ಕೇಳಿದ್ದು, ಕೊನೆಗೆ 4,000/- ರೂಗಳಿಗೆ ಒಪ್ಪಿದ್ದು 1,000/-ರೂ. ಲಂಚದ ಹಣವನ್ನು ಮುಂಗಡವಾಗಿ ಸ್ವೀಕರಿಸುತ್ತಾರೆ. ನಂತರ ದಿ.12/03/2019ರಂದು

ದೂರುದಾರರು ಎದುರುದಾರರನ್ನು ಭೇಟಿಯಾದ ಸಮಯದಲ್ಲಿ, ಉಳಿದ 3,000/- ರೂ.ಗಳನ್ನು ಕೊಡು ಆಮೇಲೆ ಪೌತಿ ಖಾತೆದು ಮಾತನಾಡೋಣ ಎಂದು ದೂರುದಾರರಿಗೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಸಂಬಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

ii. ದಿ:13/03/2019 ರಂದು ಬೆಳಿಗ್ಗೆ 08:00 ಗಂಟೆ ಸುಮಾರಿಗೆ ದೂರುದಾರರು ತಮ್ಮ ಮೊಬೈಲ್ ನಂ.6364283098 ರಿಂದ ಎದುರುದಾರರ ಮೊಬೈಲ್ ನಂ.7892480312ಗೆ ಫೋನ್ ಮಾಡಿದ್ದು, ಆಗ ಎದುರುದಾರರು ದೂರುದಾರರಿಗೆ ನಿಮ್ಮೂರಿಗೆ ನಾನೇ ಬರುತ್ತೇನೆಂದು ಹೇಳಿದ್ದು, ಸದರಿ ಸಂಭಾಷಣೆಯನ್ನು ಸಹ ದೂರುದಾರರು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

iii. ದಿ.13/03/2019ರಂದು ಬೆಳಿಗ್ಗೆ 11-45 ಗಂಟೆಗೆ ದೂರುದಾರರು ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ತುಮಕೂರು ಎಸಿಬಿ ಪೋಲೀಸ್ ಠಾಣೆ ಮೊ. ಸಂ. 07/2019 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iv. ಪ್ರಕರಣ ದಾಖಲಾದ ನಂತರ ದಿನಾಂಕ: 13/03/2019 ರಂದು ಮಧ್ಯಾಹ್ನ 12-45 ಗಂಟೆಗೆ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ಬಿ. ಲಿಂಗೇಗೌಡ, 2) ಶ್ರೀ ಆನಂದ್, (ನೆರಳು ಸಾಕ್ಷಿ) ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ಒಂದು ಮೆಮೊರಿ ಕಾರ್ಡ್‌ನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಸದರಿ ಮೆಮೊರಿ ಕಾರ್ಡ್‌ನ್ನು ಲ್ಯಾಪ್ ಟಾಪ್‌ಗೆ ಹಾಕಿ ಪ್ಲೇ ಮಾಡಿ, ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ. 2,000/- ಮುಖಬೆಲೆಯ 01-ನೋಟು ಮತ್ತು ರೂ. 500/- ಮುಖಬೆಲೆಯ 02-ನೋಟುಗಳು) ಒಟ್ಟು 3,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ತನಿಖಾಧಿಕಾರಿಗಳು ಪಂಚರ ಕಡೆಯಿಂದ ಪ್ರತ್ಯೇಕ ಹಾಳೆಯಲ್ಲಿ ಬರೆಯಿಸಿದ್ದು, ಅವುಗಳ ನಂ. ಮತ್ತು ಮೌಲ್ಯವನ್ನು ಪಂಚರು ಪರಿಶೀಲಿಸಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲೀನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚ ಸಾಕ್ಷಿ ಬಿ. ಲಿಂಗೇಗೌಡರವರ ಕೈಗೆ ಕೊಟ್ಟಿದ್ದು, ಸದರಿಯವರು ಸದರಿ ನೋಟುಗಳನ್ನು ಎಣಿಸಿ ಅವುಗಳ ನಂ. ಮತ್ತು ಮೌಲ್ಯವನ್ನು ತಾಳೆ ಮಾಡಿ ಖಾತ್ರಿ ಪಡಿಸಿಕೊಂಡಿರುತ್ತಾರೆ ಹಾಗೂ ಫಿನಾಪ್ತಲೀನ್ ಲೇಪಿತ ಹಣವನ್ನು ದೂರುದಾರರು ಧರಿಸದ್ದ ಷರ್ಟಿನ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ಬಿ.

ಲಿಂಗೇಗೌಡರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಆನಂದ್‌ರವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಿ, ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ಅವರ ಕೈಗಳಿಂದ ತಲೆಯನ್ನು ಒರೆಸಿಕೊಳ್ಳುವಂತೆ ಸನ್ನೆ ಮಾಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡನ್ನು ದೂರುದಾರರಿಗೆ ತನಿಖಾಧಿಕಾರಿಗಳು ನೀಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರು ಹಾಜರುಪಡಿಸಿದ್ದ ಮೆಮೋರಿ ಕಾರ್ಡ್‌ನ್ನು ಲ್ಯಾಪ್ ಟಾಪ್‌ಗೆ ಅಳವಡಿಸಿ ಅದರಲ್ಲಿಯ ಸಂಭಾಷಣೆಯನ್ನು ಡಿವಿಡಿಗೆ ವರ್ಗಾಯಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋ ತೆಗೆಯಿಸಿ, ದಿನಾಂಕ.13.03.2019ರಂದು ಮಧ್ಯಾಹ್ನ 12-45ರಿಂದ ಮಧ್ಯಾಹ್ನ 02-00 ಗಂಟೆಯವರೆಗೆ ತುಮಕೂರು ಎಸಿಬಿ ಕಚೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

v. ಅದೇ ದಿನ ಅಂದರೆ ದಿ:13/03/2019ರಂದು ಮಧ್ಯಾಹ್ನ 03:45 ಗಂಟೆಗೆ ದೂರುದಾರರು ಹಾಗೂ ನೆರಳು ಸಾಕ್ಷಿ ಶ್ರೀ ಆನಂದ್‌ರವರೊಂದಿಗೆ ಪಳವಳ್ಳಿ ಸಪಲಮ್ಮ ದೇವಸ್ಥಾನದ ಹತ್ತಿರ ಬಂದು, ದೂರುದಾರರು ಎದುರುದಾರರಿಗೆ ಮೊಬೈಲ್‌ನಿಂದ ಫೋನ್ ಮಾಡಿ ಕೇಳಲಾಗಿ, ಎದುರುದಾರರು ನಾನು ಹೇಳಿದ ಜಾಗದಲ್ಲೆ ಇರಿ ನಾನು ಅಲ್ಲಿಗೆ ಬರುತ್ತೇನೆ ಎಂದು ಹೇಳಿರುತ್ತಾರೆ. ನಂತರ ಎದುರುದಾರರು ಬರದಿದ್ದಕ್ಕೆ ಮತ್ತೆ ಸಾಯಂಕಾಲ ಸುಮಾರು 5-00 ಗಂಟೆಗೆ ದೂರುದಾರರು ಎದುರುದಾರರಿಗೆ ಫೋನ್ ಮಾಡಿ ಕೇಳಿದಾಗ, ಎದುರುದಾರರು ನಾನು ಎಲೆಕ್ಷನ್ ಬಿಜಿ 6-00 ಗಂಟೆಗೆ ಬರುತ್ತೇನೆ ಅಲ್ಲೆ ಇರಿ ಎಂದು ಹೇಳಿರುತ್ತಾರೆ. ನಂತರ ಸುಮಾರು 6-10 ಗಂಟೆಗೆ ಒಂದು ಬೈಕ್ನಲ್ಲಿ ಎದುರುದಾರರು ಬಂದು ನನಗೆ ತುಂಬ ಅರ್ಜೆಂಟ್ ಕೆಲಸ ಇದೆ ಟೈಂ ಇಲ್ಲ ಆದ್ದರಿಂದ ದೂರುದಾರರಿಗೆ ಪಾವಗಡಕ್ಕೆ ಬಾ ಎಂದು ಹೇಳಿ ಬೈಕ್ನಲ್ಲಿ ಹೊರಟುಹೋಗಿರುತ್ತಾರೆ. ನಂತರ ಸುಮಾರು ಸಂಜೆ 7-20 ಗಂಟೆಗೆ ಪಾವಗಡಕ್ಕೆ ದೂರುದಾರರು ಹಾಗೂ ನೆರಳು ಸಾಕ್ಷಿಯವರು ಎದುರುದಾರರು ಬಾಡಿಗೆಗೆ ಮಾಡಿಕೊಂಡಿರುವ ರೂಂ ಹತ್ತಿರ ಬಂದು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರಿಂದ ರೂ.3,000/- ಲಂಚದ ಹಣವನ್ನು ಕೇಳಿ ಪಡೆದುಕೊಂಡು ಮತ್ತು ಪಡೆದ ಹಣವನ್ನು ಬಲಗೈನಲ್ಲಿ ಸ್ವೀಕರಿಸಿ ಎಡಗೈಯಿಂದ ಮುಟ್ಟಿದ್ದು, ಅನುಮಾನ ಬಂದು, ಲಂಚದ ಹಣವನ್ನು ರೂಂನ ಬಾಗಿಲ ಬಳಿ ಬಿಸಾಕಿರುತ್ತಾರೆ. ನಂತರ

ದೂರುದಾರರು ರೂಂನಿಂದ ಹೊರಬಂದು ದಾಳಿ ತಂಡದವರಿಗೆ ಕಾಣುವಂತೆ ಪೂರ್ವ ನಿಗದಿತ ಸನ್ನೆ ಮಾಡಿರುತ್ತಾರೆ.

vi. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಎದುರುದಾರರಿದ್ದ ಸ್ಥಳಕ್ಕೆ ಬಂದು, ತಮ್ಮ ಗುರುತಿನ ಚೀಟಿ ತೋರಿಸಿ ತಮ್ಮ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ರೂಂನ ಬಾಗಿಲ ಬಳಿ ಎದುರುದಾರರು ಬಿಸಾಕಿದ್ದ ಹಣವನ್ನು ಪಂಚರ ಮೂಲಕ ತೆಗೆಯಿಸಿ, ಪರಿಶೀಲಿಸಿದಾಗ ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹೋಲಿಕೆಯಾಗಿರುತ್ತವೆ. ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಎದುರುದಾರರು ಯಾವುದೇ ಸಮಂಜಸ ಉತ್ತರ ನೀಡಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾದ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಪಂಚ ಮತ್ತು ಸಿಬ್ಬಂದಿಯರೊಂದಿಗೆ ಬಂದು ಹಣವನ್ನು ವಶಪಡಿಸಿಕೊಂಡು, ಒಂದು ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ ಹಾಗೂ ಪ್ರಕರಣದ ವಿದ್ಯಾಮಾನವನ್ನು ದೂರುದಾರರಿಂದ ಮತ್ತು ನೆರಳು ಸಾಕ್ಷಿಯವರಿಂದ ತಿಳಿದು, ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಪಂಚನಾಮೆಯಲ್ಲಿ ನೀಡಿದ್ದ ವಾಯ್ಸ್ ರೆಕಾರ್ಡ್‌ರ್ ಬಗ್ಗೆ ಕೇಳಲಾಗಿ, ದೂರುದಾರರು ಗಾಬರಿಯಲ್ಲಿ ವಾಯ್ಸ್ ರೆಕಾರ್ಡ್‌ರ್‌ನ್ನು ಆನ್ ಮಾಡಲು ಮರೆತಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಡಿವಿಡಿಗಳನ್ನು ತಯಾರಿಸಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ಅಕ್ಕಲಪ್ಪರವರು ರಾಯಚೆರ್ಲು ಗ್ರಾಮದ ಸ.ನಂ.219ರಲ್ಲಿ ತಮ್ಮ ವಾರಸುದಾರ ತಿಪ್ಪನ್ನರವರ ಪೌತಿ ವಾರಸು ಖಾತೆ ಪಹಣಿ

ಬದಲಾವಣೆ ಮಾಡಿಕೊಡುವಂತೆ ನಾಡಕಚೇರಿ, ನಾಗಲಮಡಿಕೆ ಹೋಬಳಿಗೆ ಬಂದು ಅರ್ಜಿ ತೋರಿಸಿದ್ದು, ಅರ್ಜಿಯಲ್ಲಿ ಖಾತೆದಾರರಿಗೆ ಹಕ್ಕು ಬಂದಿರುವ ಬಗ್ಗೆ ಮುಟೇಶನ್ ದಾಖಲೆ ಪ್ರತಿ ಮತ್ತು ಮರಣ ಪ್ರಮಾಣ ಪತ್ರಗಳ ಧೃಢೀಕೃತ ಮಾಡಿಸಿ ಖಾತೆ ಬದಲಾವಣೆಗೆ ಅರ್ಜಿ ತೆಗೆಸಿರಿ ಎಂದು ಹೇಳಿ ಕಳುಹಿಸಿರುತ್ತೇನೆ. ಆದರೆ, ಅರ್ಜಿದಾರ ಅಕ್ಕಲಪ್ಪರವರು ಎಲ್ಲಾ ದಾಖಲೆಗಳನ್ನು ನೀವೇ ರೆಡಿ ಮಾಡಿ ಖಾತೆ ಬದಲಾವಣೆ ಮಾಡಿಕೊಡಿ ಹಣ ಬೇಕಾದರೆ ಕೊಡುತ್ತೇನೆಂದು ದೂರವಾಣಿ ಮುಖಾಂತರ ಹಾಗೂ ಕಚೇರಿಗೆ ಬಂದು ಕೇಳಿಕೊಂಡಿರುತ್ತಾರೆ. ಆದರೆ ನಾನು ಆ ಎಲ್ಲಾ ದಾಖಲೆಗಳನ್ನು ನೀವೇ ತೆಗೆದುಕೊಂಡು ತಾಲ್ಲೂಕು ಕಚೇರಿಯಲ್ಲಿ ಅರ್ಜಿ ತೆಗೆಸಿರಿ ಎಂದು ಹೇಳಿ ಕಳುಹಿಸಿರುತ್ತೇನೆ. ಸದರಿ ಅರ್ಜಿದಾರರು ಪದೇ ಪದೇ ದೂರವಾಣಿ ಮೂಲಕ ಕರೆ ಮಾಡಿ ನೀವೇ ಎಲ್ಲಾ ದಾಖಲೆ ತೆಗೆದುಕೊಂಡು ಕೊಡಿ ಎಂದು ಹೇಳುತ್ತಿರುತ್ತಾರೆ. ಆದರೆ ಖಾತೆದಾರರಿಗೆ ಹಕ್ಕು ಬಂದ ಬಗ್ಗೆ ದಾಖಲೆ ಅವರೇ ತಾಲ್ಲೂಕು ಕಚೇರಿ ಮತ್ತು ನಾಡಕಚೇರಿಯಲ್ಲಿ ಅರ್ಜಿ ಕೊಟ್ಟು ತೆಗೆದುಕೊಳ್ಳಬೇಕಾಗಿರುತ್ತದೆ.

ಸದರಿ ಅರ್ಜಿದಾರರು ಖಾತೆ ಮತ್ತು ಪಹಣಿ ಮಾಡಿಕೊಡುವಂತೆ ಕಚೇರಿಗೆ ಯಾವುದೇ ಅರ್ಜಿ ನೀಡಿರುವುದಿಲ್ಲ. ಸುಮ್ಮನೆ ಪದೇ ಪದೇ ಕರೆ ಮಾಡಿ ಖಾತೆ ಪಹಣಿ ಬದಲಾವಣೆಗೆ ಅಗತ್ಯ ದಾಖಲೆಗಳನ್ನು ನೀವೇ ತೆಗೆದುಕೊಂಡು ಪಹಣಿ ಮಾಡಿಕೊಡಿ ಹಣ ಕೊಡುತ್ತೇನೆಂದು ಹೇಳುತ್ತಿರುತ್ತಾರೆ. ಆದರೆ, ನಾನು ಇವರಿಂದ ಯಾವುದೇ ಹಣ ಪಡೆದಿರುವುದಿಲ್ಲ ಹಾಗೂ ನೀವು ತಾಲ್ಲೂಕು ಕಚೇರಿಯಲ್ಲಿ ಅರ್ಜಿ ತೆಗೆಸಿರಿ ನಾನು ಕಾನೂನು ಬದ್ದವಾಗಿ ವಂಶವೃಕ್ಷದಂತೆ ಖಾತೆ ಮತ್ತು ಪಹಣಿ ಮಾಡಿಕೊಡುತ್ತೇನೆ ಯಾವುದೇ ಹಣ ಬೇಕಿಲ್ಲ ಎಂದು ತಿಳಿಸಿರುತ್ತೇನೆ. ಆದರೆ, ದೂರುದಾರರು ಪದೇ ಪದೇ ದೂರವಾಣಿಯಲ್ಲಿ ಲಂಚದ ಬಗ್ಗೆ ಮಾತನಾಡಿರುತ್ತಾರೆ. ಸಂಜೆ ಸಮಯದಲ್ಲಿ ಸಹಾ ಪಳವಳ್ಳಿ ಹತ್ತಿರ ದಾರಿಯಲ್ಲಿ ನಿಲ್ಲಿಸಿ ಹಣ ಕೊಡುತ್ತೇನೆ ಎಂದರು ನಾನು ಯಾವುದೇ ಹಣ ಬೇಡ ಕಾನೂನು ಬದ್ದವಾಗಿ ಖಾತೆ ಮತ್ತು ಪಹಣಿ ಮಾಡಿಕೊಡುತ್ತೇನೆ ಎಂದು ತಿಳಿಸಿರುತ್ತೇನೆ. ಹಾಗೂ ರಾತ್ರಿ 8–30ಕ್ಕೆ ದೂರುದಾರರು ಮನೆಯ ಹತ್ತಿರ ಬಂದಿರುತ್ತಾರೆ ಹಾಗೂ ಕಾನೂನು ಬದ್ದವಾಗಿ ಖಾತೆ ಮತ್ತು ಪಹಣಿ ಮಾಡಿಕೊಡುತ್ತೇನೆ ಎಂದು ತಿಳಿಸಿರುತ್ತೇನೆ. ದೂರುದಾರರು ನೀಡಿರುವ ದೂರು ಸತ್ಯಕ್ಕೆ ದೂರವಾಗಿರುತ್ತದೆ. ದೂರುದಾರರಿಂದ ನಾನು ಯಾವುದೇ ಲಂಚದ ಹಣವನ್ನು ಪಡೆದಿರುವುದಿಲ್ಲ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರನ್ನು ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಿದಾಗ, ಎದುರುದಾರರು ನೀಡಿರುವ ಲಿಖಿತ ವಿವರಣೆ ತಪ್ಪಾಗಿರುವುದಾಗಿ ತಿಳಿಸಿರುತ್ತಾರೆ. ಎದುರುದಾರರು ಈ ದಿನ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆಂದು ತಿಳಿಸಿರುತ್ತಾರೆ.

ix. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಗೆ ಸಂಬಂಧಪಟ್ಟ ಕಡತವನ್ನು ಹಾಜರುಪಡಿಸಲು ತಿಳಿಸಿದಾಗ, ಅವರು ಆ ಕಡತವು ಪಾವಗಡ

ತಾಲ್ಲೂಕು ಕಚೇರಿಯ ರೆಕಾರ್ಡ್ ರೂಂ ನಲ್ಲಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರ ಮೇಲಾಧಿಕಾರಿಗಳಾದ ಶ್ರೀ. ಪರಮೇಶ್ವರಪ್ಪ, ತಹಶೀಲ್ದಾರ್, ಪಾವಗಡ ತಾಲ್ಲೂಕು, ರವರಿಗೆ ದೂರುದಾರರಿಗೆ ಸಂಬಂಧಪಟ್ಟ ಕಡತವನ್ನು ಹಾಜರುಪಡಿಸಲು ತಿಳಿಸಿದಾಗ, ಅವರು ಆ ಕಡತವು ಪಾವಗಡ ತಾಲ್ಲೂಕು ಕಚೇರಿಯ ರೆಕಾರ್ಡ್ ರೂಂ ನಲ್ಲಿರುವುದಾಗಿ ಈಗ ವೇಳೆಯಾದ್ದರಿಂದ ಅಲ್ಲಿನ ಸಿಬ್ಬಂದಿ ಇಲ್ಲದ ಕಾರಣ ನಾಳೆ ತಮ್ಮ ಕಚೇರಿಗೆ ಹಾಜರುಪಡಿಸುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಗ್ರೇಡ್ –2 ತಹಶೀಲ್ದಾರ್ ಆದೇಶದ ಮೇರೆಗೆ ಹಾಜರಾದ ಶ್ರೀ. ರೆಡ್ಡಿ ಶಿವಾನಂದಸಿದ್ದ, ಪ್ರಭಾರ ಉಪತಹಶೀಲ್ದಾರ್, ನಾಗಲಮಡಿಕೆ, ರವರು ಹಾಜರಾಗಿದ್ದು, ಅವರಿಗೆ ಎದುರುದಾರರನ್ನು ಟ್ರ್ಯಾಪ್ ಮಾಡಿದ ಬಗ್ಗೆ ತಿಳಿಸಿ, ಇವರ ಸಮಕ್ಷಮದಲ್ಲಿ, ದೂರುದಾರರು ಟ್ರ್ಯಾಪ್ ಪೂರ್ವದಲ್ಲಿ ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ಹಾಗೂ ಟ್ರ್ಯಾಪ್ ಸಮಯದಲ್ಲಿ ಲಂಚದ ಹಣದ ಬಗ್ಗೆ ಎದುರುದಾರರೊಂದಿಗೆ ಮಾತನಾಡಿದ ಸಂಭಾಷಣೆಗಳನ್ನು ಡಿವಿಡಿಗಳಿಗೆ ವರ್ಗಾಯಿಸಿದ್ದು, ಅವುಗಳನ್ನು ಒಂದೊಂದಾಗಿ ಕಂಪ್ಯೂಟರ್ ಸಹಾಯದಿಂದ ಪ್ಲೇ ಮಾಡಿ ಕೇಳಿಸಲಾಗಿ, ಅವುಗಳಲ್ಲಿನ ಒಂದು ಧ್ವನಿಯು ಎದುರುದಾರರದ್ದು ಎಂದು ಗುರುತಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ, ದಿ.13/03/2019ರಂದು ಪಾವಗಡ ಟೌನ್‌ನಲ್ಲಿರುವ ಕುವೆಂಪುನಗರ, ಕೆ.ಇ.ಬಿ. ಹಿಂಭಾಗ, ರಾಮರೆಡ್ಡಿರವರ ಮನೆಯ ಮೇಲ್ಭಾಗದಲ್ಲಿರುವ ರೂಂನಲ್ಲಿ ಸಂಜೆ 07–20 ಗಂಟೆಯಿಂದ ರಾತ್ರಿ 11–00 ಗಂಟೆಯವರೆಗೆ ಟ್ರ್ಯಾಪ್ ಪಂಚನಾಮೆಯನ್ನು ತನಿಖಾಧಿಕಾರಿಗಳು ಉಕ್ತಲೇಖನ ನೀಡಿ ತಮ್ಮ ಸಿಬ್ಬಂದಿಯಿಂದ ಲ್ಯಾಪ್‌ಟಾಪ್ ಮೂಲಕ ಬೆರಳಚ್ಚು ಮಾಡಿಸಿರುತ್ತಾರೆ.

x. ತನಿಖಾಧಿಕಾರಿಗಳು ಲಂಚದ ಹಣವನ್ನು ಜಪ್ತು ಮಾಡಿಕೊಂಡು ಪಂಚರ ಸಮಕ್ಷಮ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಂಪೂರ್ಣ ತನಿಖೆಯನ್ನು ಪೂರೈಸಿ, ಅಭಿಯೋಜನಾ ಮಂಜೂರಾತಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ವಸ್ತುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

xi. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮೊಬೈಲ್ ಧ್ವನಿ ಮುದ್ರಣವು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ವಸ್ತುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

xii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು,

ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 17/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ತಾನು ದೂರುದಾರರಿಂದ ಯಾವುದೇ ಲಂಚದ ಹಣವನ್ನು ಬೇಡಿಕೆ ಇಟ್ಟಿರುವುದಿಲ್ಲ ಮತ್ತು ಪಡೆದಿರುವುದಿಲ್ಲ ಹಾಗೂ ಸರ್ಕಾರಿ ಕೆಲಸದಲ್ಲಿ ಯಾವುದೇ ಲೋಪ ಎಸಗಿರುವುದಿಲ್ಲ. ಈ ಆರೋಪ ಸುಳ್ಳಾಗಿರುತ್ತದೆ. ದೂರುದಾರರು ದುರುದ್ದೇಶದಿಂದ ತನ್ನ ವಿರುದ್ಧ ಆರೋಪ ಮಾಡಿರುತ್ತಾರೆ, ತಾನು ಸರ್ಕಾರಿ ನೌಕರಿಯಲ್ಲಿ ನಿಯಮ/ನಿಷ್ಠೆಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಯಾವುದೇ ದುರ್ನಡತೆಯನ್ನು ತೋರಿರುವುದಿಲ್ಲ, ಆದ್ದರಿಂದ ಆರೋಪ ಕೈಬಿಟ್ಟು ತನಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಎದುರುದಾರರು ನೀಡಿರುವ ಉತ್ತರದಲ್ಲಿ, ಅವರ ವಿರುದ್ಧದ ಅಪಾದನೆಗಳನ್ನು ಅಲ್ಲಗಳೆದಿದ್ದು, ತನಿಖಾ ಕಾಲದಲ್ಲಿ ಸಂಗ್ರಹಿಸಿದ ಮಹಜರ್ ಮತ್ತಿತರ ದಾಖಲೆಗಳು ಮತ್ತು ಸಾಕ್ಷಿದಾರರ ಹೇಳಿಕೆಗಳು ಅವರ ಸಮಜಾಯಿಷಿಯನ್ನು ನಂಬಲು ಮತ್ತು ಅವರ ವಿರುದ್ಧದ ನಡವಳಿಯನ್ನು ಕೈ ಬಿಡಲು ಪೂರಕವಾಗಿರುವುದಿಲ್ಲ. ಆದುದರಿಂದ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

3) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

4) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

5) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

16/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.